# ಭಾರತಕ್ಕೆ 297 ಪ್ರಾಚೀನ ವಸ್ತುಗಳನ್ನು ಹಿಂತಿರುಗಿಸಿದ ಅಮೆರಿಕ ಸಂಯುಕ್ತ ಸಂಸ್ಥಾನ

ಸೆಪ್ಟೆಂಬರ್ 21, 2024

ದ್ವಿಪಕ್ಷೀಯ ಒಪ್ಪಂದಗಳು ಹಾಗೂ ಅಮೆರಿಕದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವ್ಯವಹಾರಗಳ ಬ್ಯೂರೋ ಮತ್ತು ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಮಧ್ಯೆ ಸಾಂಸ್ಕೃತಿಕ ತಿಳಿವಳಿಕೆ ಮೂಡಿದೆ. ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಣೆ ಮಾಡುವ ದಿಸೆಯಲ್ಲಿ 2023ರ ಜೂನ್ ತಿಂಗಳಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಹಾಗೂ ಅಮೆರಿಕ ಅಧ್ಯಕ್ಷ ಶ್ರೀ ಜೋ ಬೈಡೆನ್ ಅವರು ಹೊರಡಿಸಿದ ಜಂಟಿ ಪ್ರಕಟಣೆಯಂತೆ 2024ರ ಜೂನ್ ತಿಂಗಳಲ್ಲಿ ಸಾಂಸ್ಕೃತಿಕ ಆಸ್ತಿ ಒಪ್ಪಂದ ಮಾಡಿಕೊಳ್ಳಲಾಗಿದೆ.

2. ಭಾರತದಿಂದ ಕಳ್ಳಸಾಗಣೆ ಅಥವಾ ಕಳ್ಳತನ ಮಾಡಲಾದ 297 ಪ್ರಾಚೀನ ವಸ್ತುಗಳನ್ನು ಅಮೆರಿಕವು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ಭೇಟಿ ನೀಡಿದಾಗ ಹಿಂತಿರುಗಿಸಿದೆ. ವಿಲ್ಮಿಂಗ್ಟನ್ ನ ಡೆಲಾವೇರ್ ನಲ್ಲಿ ಪ್ರಧಾನಮಂತ್ರಿ ಹಾಗೂ ಅಧ್ಯಕ್ಷರು ದ್ವಿಪಕ್ಷೀಯ ಮಾತುಕತೆಯ ನೇಪಥ್ಯದಲ್ಲಿಯೇ ಭೇಟಿಯಾದ ವೇಳೆ ಹಲವು ಪುರಾತನ ವಸ್ತುಗಳನ್ನು ಪ್ರದರ್ಶನಕ್ಕೆ ಇರಿಸಲಾಗಿತ್ತು. ಈ ಕಲಾಕೃತಿಗಳನ್ನು ಹಿಂತಿರುಗಿಸಿದ ಕಾರಣ ಅಧ್ಯಕ್ಷ ಬೈಡೆನ್ ಅವರಿಗೆ ಪ್ರಧಾನಮಂತ್ರಿಯವರು ಧನ್ಯವಾದ ತಿಳಿಸಿದರು. ಇವೆಲ್ಲವೂ ಕೇವಲ ಭಾರತದ ಸಾಂಸ್ಕೃತಿಕ ಹಿರಿಮೆ ಸಾರುವ ಕಲಾಕೃತಿಗಳು ಅಲ್ಲ, ಇವು ಭಾರತದ ನಾಗರಿಕತೆ ಹಾಗೂ ಅಂತಃಸತ್ವದ ಪ್ರಜೆಯಾಗಿವೆ ಎಂದು ಪ್ರಧಾನಮಂತ್ರಿ ತಿಳಿಸಿದರು.

3. ಭಾರತದ ಹಲವು ಪ್ರದೇಶಗಳ, ಕ್ರಿಸ್ತಪೂರ್ವ 2000ನೇ ಇಸವಿಯಿಂದ ಕ್ರಿಸ್ತಶಕ 1900ರವರೆಗಿನ ಅಂದರೆ ಸುಮಾರು 4 ಸಾವಿರ ವರ್ಷಗಳ ಇತಿಹಾಸವನ್ನು ಪ್ರಾಚೀನ ವಸ್ತುಗಳು ಹೊಂದಿವೆ. ಹೆಚ್ಚಿನ ಕಲಾಕೃತಿಗಳು ಹಾಗೂ ಪ್ರಾಚೀನ ವಸ್ತುಗಳಲ್ಲಿ ಹೆಚ್ಚಿನವು ಟೆರಾಕೋಟಾ, ಶಿಲೆ, ಲೋಹ, ಮರ ಹಾಗೂ ದಂತಗಳಿಂದ ತಯಾರಿಸಿದ ಮೂರ್ತಿಗಳಿವೆ. ಭಾರತಕ್ಕೆ ಹಸ್ತಾಂತರಿಸಿದ ಪ್ರಮುಖ ಪ್ರಾಚೀನ ವಸ್ತುಗಳ ಪಟ್ಟಿ ಇಲ್ಲಿದೆ.

* ಕೇಂದ್ರ ಭಾರತದಿಂದ ತೆಗೆದುಕೊಂಡು ಹೋಗಿದ್ದ 10-11ನೇ ಶತಮಾನದಲ್ಲಿ ಮರಳುಗಲ್ಲಿನಲ್ಲಿ ತಯಾರಿಸಿದ ಅಪ್ಸರೆ;
* ಕೇಂದ್ರ ಭಾರತದಿಂದ ರವಾನಿಸಲಾಗಿದ್ದ, 15-16ನೇ ಶತಮಾನದಲ್ಲಿ ನಿರ್ಮಿಸಿದ ಜೈನ ತೀರ್ಥಂಕರರ ಕಂಚಿನ ಮೂರ್ತಿ;
*ಪೂರ್ವ ಭಾರತದ, 3-4ನೇ ಶತಮಾನದಲ್ಲಿ ತಯಾರಿಸಿದ ಟೆರಾಕೋಟಾ;
* ದಕ್ಷಿಣ ಭಾರತಕ್ಕೆ ಸಂಬಂಧಿಸಿದ, ಕ್ರಿಸ್ತಪೂರ್ವ ಮೊದಲ ಶತಮಾನದಲ್ಲಿ ಕೆತ್ತಿದ ಶಿಲ್ಪಕಲೆ;
*17-18ನೇ ಶತಮಾನಕ್ಕೆ ಸಂಬಂಧಿಸಿದ, ದಕ್ಷಿಣ ಭಾರತದ ಗಣೇಶನ ಕಂಚಿನ ವಿಗ್ರಹ;
* ಉತ್ತರ ಭಾರತದ, 15-16ನೇ ಶತಮಾನದ ಅವಧಿಯಲ್ಲಿ ನಿರ್ಮಿಸಿದ ನಿಂತ ಸ್ಥಿತಿಯಲ್ಲಿರುವ ಬುದ್ಧನ

ಮರಳುಗಲ್ಲಿನ ವಿಗ್ರಹ;

* ಪೂರ್ವ ಭಾರತದಿಂದ ತೆಗೆದುಕೊಂಡು ಹೋಗಿದ್ದ, 17-18ನೇ ಶತಮಾನದ ಭಗವಾನ್ ವಿಷ್ಣುವಿನ ಕಂಚಿನ ಮೂರ್ತಿ;

* ಕ್ರಿಸ್ತಪೂರ್ವ 2000-1800ರ ಅವಧಿಯಲ್ಲಿ ತಯಾರಿಸಿದ, ಉತ್ತರ ಭಾರತಕ್ಕೆ ಸಂಬಂಧಿಸಿದ ತಾಮ್ರದ ಆಂಥ್ರೋಮಾರ್ಫಿಕ್ (ಮಾನವರೂಪಿ) ಫಿಗರ್;

*ದಕ್ಷಿಣ ಭಾರತದ, 17-18ನೇ ಶತಮಾನದ ಭಗವಾನ್ ಕೃಷ್ಣನ ಕಂಚಿನ ಮೂರ್ತಿ,

*13-14ನೇ ಶತಮಾನದ, ಗ್ರಾನೈಟ್ ಶಿಲೆಯಲ್ಲಿ ಕೆತ್ತಿದ ದಕ್ಷಿಣ ಭಾರತದ ಭಗವಾನ್ ಕಾರ್ತಿಕೇಯನ ಮೂರ್ತಿ.

4. ಇತ್ತೀಚಿನ ವರ್ಷಗಳಲ್ಲಿ, ಭಾರತ-ಅಮೆರಿಕ ನಡುವಿನ ಸಾಂಸ್ಕೃತಿಕ ಸಂಬಂಧವನ್ನು ಅರ್ಥಮಾಡಿಕೊಂಡು ಸಾಂಸ್ಕೃತಿಕ ಪರಂಪರೆಯನ್ನು ಸಾರುವ ಪ್ರಾಚೀನ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳಲಾಗುತ್ತಿದೆ. 2016ರಿಂದಲೂ ಅಮೆರಿಕ ಸರ್ಕಾರವು ಭಾರತದಿಂದ ಅಕ್ರಮವಾಗಿ ಸಾಗಿಸಿದ ಅಥವಾ ಕಳ್ಳತನ ಮಾಡಲಾದ ಪುರಾತನ ವಸ್ತುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಹಿಂತಿರುಗಿಸುತ್ತಿದೆ. 2016ರ ಜೂನ್ ತಿಂಗಳಲ್ಲಿ ಪ್ರಧಾನಮಂತ್ರಿಯವರು ಅಮೆರಿಕಕ್ಕೆ ತೆರಳಿದ್ದಾಗ 10 ಪ್ರಾಚೀನ ವಸ್ತುಗಳನ್ನು ಹಿಂತಿರುಗಿಸಲಾಗಿತ್ತು. ಅದೇ ರೀತಿ, 2021ರ ಸೆಪ್ಟೆಂಬರ್ ತಿಂಗಳಲ್ಲಿ ಭೇಟಿ ನೀಡಿದ್ದಾಗ 157, ಕಳೆದ ವರ್ಷದ ಜೂನ್ ತಿಂಗಳಲ್ಲಿ ಭೇಟಿ ನೀಡಿದ್ದಾಗ 105 ಪ್ರಾಚೀನ ವಸ್ತುಗಳನ್ನು ನೀಡಲಾಗಿತ್ತು. 2016ರಿಂದ ಇದುವರೆಗೆ ಅಮೆರಿಕದಿಂದ ಒಟ್ಟು 578 ಸಾಂಸ್ಕೃತಿಕ ಕಲಾಕೃತಿಗಳನ್ನು ಭಾರತಕ್ಕೆ ವಾಪಸ್ ತರಲಾಗಿದೆ. ಆ ಮೂಲಕ ಜಗತ್ತಿನಲ್ಲೇ ಅತಿ ಹೆಚ್ಚು ಕಲಾಕೃತಿಗಳನ್ನು ಭಾರತಕ್ಕೆ ಹಿಂತಿರುಗಿಸಿದ ಖ್ಯಾತಿಗೆ ಅಮೆರಿಕದ್ದಾಗಿದೆ.

**ವಿಲ್ಮಿಂಗ್ಟನ್, ಡೆಲಾವೇರ್**

**ಸೆಪ್ಟೆಂಬರ್ 21, 2024**